**All India Radio: Bangalore**
**National Bulletin In Kannada**
**05.01.2026  1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<>><><*><><<>**

ಮುಖ್ಯಾಂಶಗಳು

೧. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಂದ ಮಾಲಿನ್ಯ ನಿಯಂತ್ರಣಾ ಹಡಗು ಸಮುದ್ರ ಪ್ರತಾಪ್ ಲೋಕಾರ್ಪಣೆ

೨. ೨೦೨೦ರ ದೆಹಲಿ ಗಲಭೆ ಪಿತೂರಿ ಪ್ರಕರಣ ; ಆರೋಪಿಗಳಾದ ಉಮರ್, ಶಾರ್ಜಿಲ್‌ಗೆ ಜಾಮೀನು ನಿರಾಕರಿಸಿದ ಸುಪ್ರೀಂಕೋರ್ಟ್

೩. ವೆನೆಜುವೆಲಾದಲ್ಲಿ ನಡೆದ ಅಮೆರಿಕ ಮಿಲಿಟರಿ ಕಾರ್ಯಾಚರಣೆಯಲ್ಲಿ ಕ್ಯೂಬಾದ ೩೨ ಸೇನಾಧಿಕಾರಿಗಳು ಸಾವು

೪. ಇಂದಿನಿಂದ ಖೇಲೋ ಇಂಡಿಯಾ ಬೀಚ್ ಕ್ರೀಡಾಕೂಟ ಆರಂಭ

**<>><><*><><<>**

ಭಾರತೀಯ ಕರಾವಳಿ ರಕ್ಷಣಾ ಪಡೆಯ ಮೊದಲ ದೇಶೀಯವಾಗಿ ವಿನ್ಯಾಸಗೊಳಿಸಿ, ನಿರ್ಮಿಸಲಾದ ಮಾಲಿನ್ಯ ನಿಯಂತ್ರಣ ಹಡಗು 'ಸಮುದ್ರ ಪ್ರತಾಪ್' ಅನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗೋವಾದಲ್ಲಿ ಇಂದು ಲೋಕಾರ್ಪಣೆಗೊಳಿಸಿದರು. ೧೧೪.೫ ಮೀಟರ್ ಉದ್ದದ ನೌಕೆಯನ್ನು ಶೇಕಡಾ ೬೦ ಕ್ಕಿಂತ ಹೆಚ್ಚು ದೇಶೀಯ ವಸ್ತುಗಳಿಂದ ನಿರ್ಮಿಸಲಾಗಿದೆ. ೪ ಸಾವಿರದ ೨೦೦ ಟನ್ ತೂಕದ ಈ ಹಡಗು, ೨೨ ನಾಟ್ಸ್‌ಗಳಿಗಿಂತ ಹೆಚ್ಚು ವೇಗ ಮತ್ತು ೬ ಸಾವಿರ ನಾಟಿಕಲ್ ಮೈಲುಗಳ ಕ್ಷಮತೆಯನ್ನು ಹೊಂದಿದೆ. ಈ ಹಡಗು ಸಮುದ್ರದ ಮಾಲಿನ್ಯ ನಿಯಂತ್ರಣ, ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳು ಮತ್ತು ಭಾರತದ ವಿಶೇಷ ಆರ್ಥಿಕ ವಲಯವನ್ನು ರಕ್ಷಿಸಲು ನಿರ್ಣಾಯಕ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. 'ಸಮುದ್ರ ಪ್ರತಾಪ್' ಸೇರ್ಪಡೆಯೊಂದಿಗೆ, ಭಾರತೀಯ ಕರಾವಳಿ ರಕ್ಷಣಾ ಪಡೆ ತನ್ನ ಕಾರ್ಯಾಚರಣೆಯ ಸಿದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ ಮತ್ತು ಕಡಲ ಸುರಕ್ಷತೆ, ಪರಿಸರ ಸಂರಕ್ಷಣೆ ಮತ್ತು ಸ್ಥಳೀಯ ರಕ್ಷಣಾ ಉತ್ಪಾದನೆಗೆ ಭಾರತದ ಬದ್ಧತೆಯನ್ನು ಬಲಪಡಿಸುತ್ತದೆ.

**<>><><*><><<>**

ಕಳೆದ ಸಾವಿರ ವರ್ಷಗಳಿಂದ ಗುಜರಾತ್‌ನ ಸೋಮನಾಥ ದೇವಾಲಯ, ದೇಶದ ಅದಮ್ಯ ನಾಗರಿಕತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಲೇಖನವೊಂದರಲ್ಲಿ ಅವರು, ಪದೇ ಪದೆ ದಾಳಿಗಳು ಮತ್ತು ಅಪಾರ ಪ್ರತಿಕೂಲ ಪರಿಸ್ಥಿತಿಗಳ

ಹೊರತಾಗಿಯೂ ಸೋಮನಾಥ ದೇವಾಲಯವು ಇನ್ನೂ ಉನ್ನತ ಸ್ಥಾನದಲ್ಲಿದೆ. ಸೋಮನಾಥ ಎಂಬ ಪದವನ್ನು ಕೇಳಿದಾಗ ಜನರ ಹೃದಯ ಮತ್ತು ಮನಸ್ಸಿನಲ್ಲಿ ಹೆಮ್ಮೆಯ ಭಾವನೆ ಮೂಡುತ್ತದೆ ಎಂದು ಪ್ರಧಾನಿ ಹೇಳಿದರು. ಸೋಮನಾಥನ ಕಥೆ ಕೇವಲ ದೇವಾಲಯದ ಬಗ್ಗೆ ಅಲ್ಲ, ಬದಲಾಗಿ ದೇಶದ ಸಂಸ್ಕೃತಿ ಮತ್ತು ನಾಗರಿಕತೆಯನ್ನು ರಕ್ಷಿಸಿದ ಭಾರತ ಮಾತೆಯ ಅಸಂಖ್ಯಾತ ಮಕ್ಕಳ ಅವಿನಾಭಾವ ಧೈರ್ಯದ ಕಥೆಯಾಗಿದೆ. ಲಕ್ಷಾಂತರ ಜನರು ಪೂಜಿಸುವ ಸೋಮನಾಥ ದೇವಾಲಯದ ಮೇಲೆ ೧೦೨೬ ನೇ ಇಸವಿಯ ಜನವರಿಯಲ್ಲಿ ಮೊಹಮ್ಮದ್ ಘಜ್ನಿ, ಆಕ್ರಮಣದ ಮೂಲಕ ನಂಬಿಕೆ ಮತ್ತು ನಾಗರಿಕತೆಯ ಮಹಾನ್ ಸಂಕೇತವನ್ನು ನಾಶಮಾಡಲು ಪ್ರಯತ್ನಿಸಿದ ಎಂದರು. ಸಾವಿರ ವರ್ಷಗಳ ನಂತರವೂ, ಸೋಮನಾಥ ದೇವಾಲಯವನ್ನು ಭವ್ಯವಾಗಿ ಪುನಃಸ್ಥಾಪಿಸಲು ಅಸಂಖ್ಯಾತ ಪ್ರಯತ್ನಗಳಿಂದಾಗಿ ದೇವಾಲಯವು ಇನ್ನೂ ವೈಭವಯುತವಾಗಿ ನಿಂತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

<>><><*><><<>

೨೦೨೦ರ ದೆಹಲಿ ಗಲಭೆ ಪಿತೂರಿ ಪ್ರಕರಣದಲ್ಲಿ ಬಂಧಿತರಾಗಿರುವ ಆರೋಪಿಗಳಾದ ಉಮರ್ ಖಾಲಿದ್ ಮತ್ತು ಶಾರ್ಜಿಲ್ ಇಮಾಮ್ ಅವರಿಗೆ ಜಾಮೀನು ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದೆ. ಈ ಇಬ್ಬರು ಆರೋಪಿಗಳ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಇದೇ ವೇಳೆ ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಎನ್.ವಿ. ಅಂಜಾರಿಯಾ ಅವರಿದ್ದ ನ್ಯಾಯಪೀಠವು, ಪ್ರಕರಣಕ್ಕೆ ಸಂಬಂಧಿಸಿದಂತೆ ಇತರೆ ೫ ಆರೋಪಿಗಳಾದ ಗುಲ್ಫೀಶಾ ಫಾತಿಮಾ, ಮೀರನ್ ಹೈದರ್, ಶಿಫಾ ಉರ್ ರೆಹಮಾನ್, ಸಲೀಂಖಾನ್ ಮತ್ತು ಶಾದಾಬ್ ಅಮಹದ್ ಅವರಿಗೆ ಜಾಮೀನು ನೀಡಿದೆ.

<>><><*><><<>

ಪಶ್ಚಿಮ ಬಂಗಾಳದ ದಕ್ಷಿಣ ೨೪ ಪರಗಣ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಸಂದರ್ಭದಲ್ಲಿ ಅಲ್ಲಿಗೆ ಭೇಟಿ ನೀಡಿದ್ದ ಮತದಾರರ ಪಟ್ಟಿ ವೀಕ್ಷಕ ಸಿ.ಮುರುಗನ್ ಅವರ ಮೇಲೆ ನಡೆದ ಗುಂಪು ದಾಳಿಯಲ್ಲಿ ಗಂಭೀರ ಭದ್ರತಾ ಲೋಪಗಳಾಗಿವೆ ಎಂದು ಭಾರತೀಯ ಚುನಾವಣಾ ಆಯೋಗ ಹೇಳಿದೆ. ನಾಳೆ ಸಂಜೆ ೫ ಗಂಟೆ ಒಳಗೆ ಈ ಬಗ್ಗೆ ಕ್ರಮ ಕೈಗೊಂಡ ವರದಿ ಸಲ್ಲಿಸುವಂತೆ ಪಶ್ಚಿಮ ಬಂಗಾಳ ಪೊಲೀಸ್ ಮಹಾ ನಿರ್ದೇಶಕ ರಾಜೀವ್ ಕುಮಾರ್ ಅವರಿಗೆ ಚುನಾವಣಾ ಆಯೋಗ ಸೂಚಿಸಿದೆ. ಅಲ್ಲದೇ ಮುಂದಿನ ದಿನಗಳಲ್ಲಿ ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ಸಮಯದಲ್ಲಿ ಸುರಕ್ಷತೆಯನ್ನು ಖಚಿಪಡಿಸಿಕೊಳ್ಳಲು ಮತದಾರರ ಪಟ್ಟಿ ವೀಕ್ಷಕರು ಮತ್ತು ವಿಶೇಷ ವೀಕ್ಷಕರಿಗೆ ಅಗತ್ಯ ಭದ್ರತೆ ಕಲ್ಪಿಸುವ ನಿಟ್ಟಿನಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸುವಂತೆ ಪೊಲೀಸ್ ಮಹಾ ನಿರ್ದೇಶಕರಿಗೆ ಚುನಾವಣಾ ಆಯೋಗ ಆದೇಶಿಸಿದೆ.

<>><><*><><<>

ವಿದೇಶಾಂಗ ಸಚಿವ ಡಾ. ಎಸ್.ಜೈಶಂಕರ್ ಫ್ರಾನ್ಸ್ ಮತ್ತು ಲಕ್ಸೆಂಬರ್ಗ್‌ಗೆ ಅಧಿಕೃತ ಭೇಟಿಯಲ್ಲಿದ್ದಾರೆ. ತಮ್ಮ ಭೇಟಿಯ ಸಮಯದಲ್ಲಿ ಡಾ. ಜೈಶಂಕರ್, ಪ್ಯಾರಿಸ್‌ನಲ್ಲಿ ಫ್ರಾನ್ಸ್ ನಾಯಕರನ್ನು ಭೇಟಿ ಮಾಡಲಿದ್ದಾರೆ ಮತ್ತು ಫ್ರಾನ್ಸ್ ವಿದೇಶಾಂಗ ಸಚಿವ ಜೀನ್ ನೋಯೆಲ್ ಬ್ಯಾರಟ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ.  ಭಾರತ-ಫ್ರಾನ್ಸ್ ಕಾರ್ಯತಂತ್ರದ ಪಾಲುದಾರಿಕೆಯ ಅಡಿಯಲ್ಲಿ ಸಾಧಿಸಿದ ಪ್ರಗತಿ ಮತ್ತು ಜಾಗತಿಕ ಪ್ರಾಮುಖ್ಯತೆಯ ವಿಷಯಗಳ ಕುರಿತು ಅವರು ಚರ್ಚಿಸಲಿದ್ದಾರೆ. ಡಾ. ಜೈಶಂಕರ್ ಅವರು ೩೧ ನೇ ಆವೃತ್ತಿಯ ಫ್ರಾನ್ಸ್ ರಾಯಭಾರಿಗಳ ಸಮ್ಮೇಳನ ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

<>><><*><><<>

ವೆನೆಜುವೆಲಾದಲ್ಲಿ ನಡೆದ ಅಮೆರಿಕ ಮಿಲಿಟರಿ ಕಾರ್ಯಾಚರಣೆ ಸಂದರ್ಭದಲ್ಲಿ ಕ್ಯೂಬಾದ ೩೨ ಮಿಲಿಟರಿ ಮತ್ತು ಪೊಲೀಸ್ ಅಧಿಕಾರಿಗಳು ಸಾವನ್ನಪ್ಪಿದ್ದಾರೆ ಎಂದು ಕ್ಯೂಬಾ ಸರ್ಕಾರ ತಿಳಿಸಿದೆ. ಕ್ಯೂಬಾದ ಈ ಅಧಿಕಾರಿಗಳು ವೆನೆಜುವೆಲಾದಲ್ಲಿ ಕಾರ್ಯಾಚರಣೆಯಲ್ಲಿದ್ದರು. ಮೃತಪಟ್ಟ ಅಧಿಕಾರಿಗಳ ಸ್ಮರಣಾರ್ಥ ಕ್ಯೂಬಾ ಸರ್ಕಾರ ಎರಡು ದಿನಗಳ ಶೋಕಾಚರಣೆ ಘೋಷಿಸಿದೆ. ಮಾದಕದ್ರವ್ಯ ಬೆದರಿಕೆಗಳನ್ನು ಎದುರಿಸಲು ವೆನೆಜುವೆಲಾ ಅಧ್ಯಕ್ಷ ನಿಕೋಲಸ್ ಮಡುರೊ ಮತ್ತು ಅವರ ಪತ್ನಿಯನ್ನು ಬಂಧಿಸಲಾಗಿದೆ ಎಂದು ಅಮೆರಿಕ ಹೇಳಿದೆ. ಇದೇ ವೇಳೆ, ವೆನೆಜುವೆಲಾ ಕಾರ್ಯಾಚರಣೆ ಸಂದರ್ಭದಲ್ಲಿ ಅಮೆರಿಕದ ಯಾವುದೇ ಅಧಿಕಾರಿಯ ಸಾವು-ನೋವು ಸಂಭವಿಸಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

<>><><*><><<>

೨೦೨೫ನೇ ವರ್ಷ ಭಾರತದ ಪಯಣದಲ್ಲಿ ನಿರ್ಣಾಯಕ ಅಧ್ಯಾಯವಾಗಿದೆ. ನೀತಿಗಳು ಪ್ರಗತಿಯಾಗಿ ಮತ್ತು ಉದ್ದೇಶ ಪರಿಣಾಮವಾಗಿ ರೂಪಾಂತರಗೊಂಡಿವೆ. ಇಂದಿನ ಈ ವಿಶೇಷ ಸರಣಿ ಸುಧಾರಣೆಗಳ ವರ್ಷದಲ್ಲಿ ೨೦೨೫ರಲ್ಲಿ ಇಂಧನ ಕ್ಷೇತ್ರದಲ್ಲಿ ಭಾರತದ ಪ್ರಗತಿ ಕುರಿತು ವಿಶೇಷ ವರದಿ ಮೂಡಿಬರಲಿದೆ.

ಧ್ವನಿ: ವಿಶೇಷ ವರದಿ (ಶ್ರೀಲಕ್ಷ್ಮೀ-  ಸೆಕೆಂಡ್‌ಗಳು)

<>><><*><><<>

೨೦೨೫ ರಲ್ಲಿ ಭಾರತದ ಇಂಧನ ವಲಯ ವಿದ್ಯುತ್, ಪರಮಾಣು ಶಕ್ತಿ, ಶುದ್ಧ ಪರಿವರ್ತನೆ ಮತ್ತು ಕಾರ್ಯತಂತ್ರದ ಸಾಮಾಗ್ರಿಗಳಲ್ಲಿ ದೀರ್ಘಕಾಲದಿಂದ ಬಾಕಿ ಉಳಿದಿದ್ದ ಸುಧಾರಣೆಗಳು ಅಂತಿಮವಾಗಿ ಅನುಷ್ಠಾನಕ್ಕೆ ಬಂದಿದೆ. ಶಾಂತಿ ಮಸೂದೆಯ ಅಂಗೀಕಾರದೊಂದಿಗೆ ಭಾರತ ನಾಗರಿಕ ಪರಮಾಣು ವಲಯದಲ್ಲಿ ದಶಕಗಳ ಕಾಲದ ನಿಶ್ಚಲತೆಯನ್ನು ಕೊನೆಗೊಳಿಸಿತು. ೨೦೪೭ರ ವೇಳೆಗೆ ಪರಮಾಣು ಇಂಧನ ಸಾಮರ್ಥ್ಯವನ್ನು ೧೦ಪಟ್ಟು ಹೆಚ್ಚಿಸುವ

ಯೋಜನೆಯೊಂದಿಗೆ ಭಾರತ ಮುಂದುವರಿಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ದೇಶದ ವಿದ್ಯುತ್ ವಲಯವನ್ನು ಬಲಪಡಿಸುವ ಮೂಲಕ ವಿದ್ಯುತ್ ತಿದ್ದುಪಡಿ ಮಸೂದೆ-೨೦೨೫, ವಿದ್ಯುತ್ ವಿತರಣೆ, ವಿದ್ಯುತ್ ಜಾಲ ಆಧುನೀಕರಣ ಮತ್ತು ಆರ್ಥಿಕ ಶಿಸ್ತಿಗೆ ಆದ್ಯತೆ ನೀಡುತ್ತದೆ.

<>><><*><><<>

ಎರಡನೇ ಖೇಲೋ ಇಂಡಿಯಾ ಬೀಚ್ ಕ್ರೀಡಾಕೂಟ ಇಂದು ಡಿಯುವಿನ ಘೋಘ್ಲಾ ಬೀಚ್‌ನಲ್ಲಿ ಆರಂಭವಾಗಲಿದೆ.  ಕೇಂದ್ರಾಡಳಿತ ಪ್ರದೇಶವಾದ ದಾದ್ರಾ ಮತ್ತು ನಗರ ಹವೇಲಿ ಹಾಗೂ ದಮನ್ ಮತ್ತು ಡಿಯು ಆಯೋಜಿಸುತ್ತಿರುವ ಬೀಚ್ ಕ್ರೀಡಾಕೂಟದ ಎಂಟು ವಿಭಿನ್ನ ಕ್ರೀಡೆಗಳಲ್ಲಿ ಎರಡು ಸಾವಿರದ ೧೦೦ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.  ಈ ಕ್ರೀಡಾಕೂಟಗಳು ಇಂದಿನಿಂದ ೧೦ ರವರೆಗೆ ಭಾರತೀಯ ಕ್ರೀಡಾ ಪ್ರಾಧಿಕಾರ ಮತ್ತು ರಾಷ್ಟ್ರೀಯ ಕ್ರೀಡಾ ಒಕ್ಕೂಟಗಳ ತಾಂತ್ರಿಕ ಮೇಲ್ವಿಚಾರಣೆಯಲ್ಲಿ ನಡೆಯಲಿವೆ. ಬೀಚ್ ಸಾಕರ್, ಬೀಚ್ ವಾಲಿಬಾಲ್, ಬೀಚ್ ಸೆಪಕ್ ಟಕ್ರಾ, ಬೀಚ್ ಕಬಡ್ಡಿ, ಪೆನ್ಕಾಕ್ ಸಿಲಾಟ್ ಮತ್ತು ಓಪನ್ ವಾಟರ್ ಈಜು ಇವು ಆರು ಪದಕ ಕ್ರೀಡಾ ಸ್ಪರ್ಧೆಗಳಾಗಿವೆ. ಮಲ್ಲಕಂಬ ಮತ್ತು ಟಗ್ ಆಫ್ ವಾರ್ ಪದಕೇತರ ಕ್ರೀಡಾ ಸ್ಪರ್ಧೆಗಳಾಗಿವೆ.

<>><><*><><<>

ಅಸ್ಸಾಂನಲ್ಲಿಂದು ಬೆಳಗಿನಜಾವ ೪ ಗಂಟೆ ೧೭ ನಿಮಿಷಕ್ಕೆ  ಭೂಕಂಪ ಸಂಭವಿಸಿದೆ. ಅಸ್ಸಾಂನ ಮೋರಿಗಾಂವ್ ಜಿಲ್ಲೆಯಲ್ಲಿ ಭೂಕಂಪದ ಕೇಂದ್ರಬಿಂದುವಿದೆ. ಭೂಕಂಪದಿಂದ ಯಾವುದೇ ಜೀವಹಾನಿ ಅಥವಾ ಆಸ್ತಿ-ಪಾಸ್ತಿ ಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ. ನೆರೆಯ ರಾಷ್ಟ್ರಗಳಾದ ಭೂತಾನ್, ನೇಪಾಳ ಮತ್ತು ಬಾಂಗ್ಲಾದೇಶದಲ್ಲೂ ಕಂಪನದ ವರದಿಯಾಗಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>